# <u>ನಗರ ಸಿವಿಲ್ ನ್ಯಾಯಾಲಯ</u>

ಸಂಖ್ಯೆ: ಆ.ವಿ.1(ಎ)/**246**/2022

ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ,
ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು,
ದಿನಾಂಕ: 20 ನೇ ಏಪ್ರಿಲ್,2022

---

## ನೇಮಕಾತಿ ಅಧಿಸೂಚನೆ

**ಶೀಘ್ರಲಿಪಿಗಾರರು ಗ್ರೇಡ್-III, ಬೆರಳಚ್ಚುಗಾರರು, ಆದೇಶ ಜಾರಿಕಾರರು ಹಾಗೂ ಜವಾನ ಹುದ್ದೆಗಳಿಗಾಗಿ ನೇಮಕಾತಿ ಕುರಿತು.**

**ಆನ್-ಲೈನ್ ಮೂಲಕ ಅರ್ಜಿಸಲ್ಲಿಸಲು ಕೊನೆಯ ದಿನಾಂಕ: <u>20 ನೇ ಮೇ, 2022</u>.**

ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಘಟಕದಲ್ಲಿ ಖಾಲಿ ಇರುವ ***ಶೀಘ್ರಲಿಪಿಗಾರರು ಗ್ರೇಡ್-III, ಬೆರಳಚ್ಚುಗಾರರು, ಆದೇಶ ಜಾರಿಕಾರರು ಹಾಗೂ ಜವಾನ*** ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶೀಘ್ರಲಿಪಿಗಾರರು ಗ್ರೇಡ್-III, ಬೆರಳಚ್ಚುಗಾರರು, ಆದೇಶ ಜಾರಿಕಾರರು ಹಾಗೂ ಜವಾನ ಹುದ್ದೆಗಳಿಗೆ **ಆನ್ ಲೈನ್ ಅರ್ಜಿಗಳನ್ನು ಸಲ್ಲಿಸುವ** ಜಾಲತಾಣ:-

**https://districts.ecourts.gov.in/ccc-online-recruitment**

<u>ರಿಕ್ತ ಸ್ಥಾನಗಳ ವಿವರ</u>

**ಶೀಘ್ರಲಿಪಿಗಾರರು ಗ್ರೇಡ್-III**

| ಕ್ರಮ ಸಂಖ್ಯೆ | ವರ್ಗೀಕರಣ | ಖಾಲಿ ಹುದ್ದೆಗಳು | ಹಿಂಬಾಕಿ ಹುದ್ದೆಗಳು | ಒಟ್ಟು |
|---|---|---|---|---|
| 1 | ಉಳಿಕೆ ಮೂಲ ವೃಂದ | 0 | 13 | 13 |
| 2 | 371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳಿಯ ವೃಂದ | 1 | 3 | 4 |
| | **ಒಟ್ಟು** | **1** | **16** | **17** |

**ಬೆರಳಚ್ಚುಗಾರರು**

| ಕ್ರಮ ಸಂಖ್ಯೆ | ವರ್ಗೀಕರಣ | ಖಾಲಿ ಹುದ್ದೆಗಳು | ಹಿಂಬಾಕಿ ಹುದ್ದೆಗಳು | ಒಟ್ಟು |
|---|---|---|---|---|
| 1 | ಉಳಿಕೆ ಮೂಲ ವೃಂದ | 20 | 0 | 20 |
| 2 | 371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳಿಯ ವೃಂದ | 4 | 0 | 4 |
| | **ಒಟ್ಟು** | **24** | **0** | **24** |

**ಆದೇಶಜಾರಿಕಾರರು**

| ಕ್ರಮ ಸಂಖ್ಯೆ | ವರ್ಗೀಕರಣ | ಖಾಲಿ ಹುದ್ದೆಗಳು | ಹಿಂಬಾಕಿ ಹುದ್ದೆಗಳು | ಒಟ್ಟು |
|---|---|---|---|---|
| 1 | ಉಳಿಕೆ ಮೂಲ ವೃಂದ | 1 | 0 | 1 |
| 2 | 371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳಿಯ ವೃಂದ | 4 | 0 | 4 |
| | **ಒಟ್ಟು** | **5** | **0** | **5** |

**ಜವಾನ**

| ಕ್ರಮ ಸಂಖ್ಯೆ | ವರ್ಗೀಕರಣ | ಖಾಲಿ ಹುದ್ದೆಗಳು | ಹಿಂಬಾಕಿ ಹುದ್ದೆಗಳು | ಒಟ್ಟು |
|---|---|---|---|---|
| 1 | ಉಳಿಕೆ ಮೂಲ ವೃಂದ | 63 | 0 | 63 |
| 2 | 371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳಿಯ ವೃಂದ | 24 | 0 | 24 |
| | **ಒಟ್ಟು** | **87** | **0** | **87** |

**<u>ಖಾಲಿ ಹುದ್ದೆಗಳ ವರ್ಗೀಕರಣ</u>**

**ಶೀಘ್ರಲಿಪಿಗಾರರು ಗ್ರೇಡ್-III ಹುದ್ದೆಗಳು**
**ಉಳಿಕೆ ಮೂಲ ವೃಂದ**

**ಶೀಘ್ರಲಿಪಿಗಾರರು ಗ್ರೇಡ್-III ಒಟ್ಟು -13 ಹಿಂಬಾಕಿ ಹುದ್ದೆಗಳು**

| ಕ್ರಮ ಸಂಖ್ಯೆ | ವರ್ಗೀಕರಣ | ಮೀಸಲು ರಹಿತ | ಮಹಿಳೆ | ಮಾಜಿ ಸೈನಿಕ | ಗ್ರಾಮೀಣ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ | ಒಟ್ಟು |
|---|---|---|---|---|---|---|---|
| 1. | ಪರಿಶಿಷ್ಟ ಜಾತಿ | - | 01 | 02 | 03 | 01* | 07 |
| 2. | ಪರಿಶಿಷ್ಟ ಪಂಗಡ | - | 01 | - | 01 | - | 02 |
| 3. | ಪ್ರವರ್ಗ-I | - | 01 | - | - | - | 01 |
| 4. | ಪ್ರವರ್ಗ-II ಬಿ | 01 | - | - | - | - | 01 |
| 5. | ಪ್ರವರ್ಗ-III ಎ | - | - | - | 01 | - | 01 |
| 6. | ಪ್ರವರ್ಗ-III ಬಿ | - | - | - | 01 | - | 01 |

| | | | | | | |
|---|---|---|---|---|---|---|
| **ಒಟ್ಟು** | **01** | **03** | **02** | **06** | **01** | **13** |

* ಚಲನವಲನ ವೈಕಲ್ಯ - ಮೆದುಳಿನ ಪಾರ್ಶ್ವ ವಾಯು, ಕುಷ್ಠ ರೋಗ ನಿವಾರಿತ, ಕುಬ್ಜತೆ, ಆಸಿಡ್ ದಾಳಿಗೆ ತುತ್ತಾದವರು ಮತ್ತು ಬಹುವಿಧ ಸ್ನಾಯು ಸೆಳೆತ ಒಳಗೊಂಡಂತೆ.

**371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳೀಯ ವೃಂದ**

**ಶೀಘ್ರಲಿಪಿಗಾರರು ಗ್ರೇಡ್-III ಒಟ್ಟು 03 ಹಿಂಬಾಕಿ ಹುದ್ದೆಗಳು**

| ಕ್ರಮ ಸಂಖ್ಯೆ | ವರ್ಗೀಕರಣ | ಮೀಸಲು ರಹಿತ |
|---|---|---|
| 7. | ಪರಿಶಿಷ್ಟ ಜಾತಿ | 01 |
| 8. | ಪರಿಶಿಷ್ಟ ಪಂಗಡ | 01 |
| 9. | ಪ್ರವರ್ಗ-II ಎ | 01 |
| **ಒಟ್ಟು** | | 03 |

**ಶೀಘ್ರಲಿಪಿಗಾರರು ಗ್ರೇಡ್-III ಒಟ್ಟು -01 ಹುದ್ದೆ**

| ಕ್ರಮ ಸಂಖ್ಯೆ | ವರ್ಗೀಕರಣ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ |
|---|---|---|
| 10. | ಸಾಮಾನ್ಯ ವರ್ಗ | 01* |
| | ಒಟ್ಟು | 01 |

*ಅಂಧ ಮತ್ತು ದೃಷ್ಟಿ ಮಾಂದ್ಯ

**ಬೆರಳಚ್ಚುಗಾರರ ಹುದ್ದೆಗಳು**
**ಉಳಿಕೆ ಮೂಲ ವೃಂದ**

**ಬೆರಳಚ್ಚುಗಾರರು - 20 ಹುದ್ದೆಗಳು**

| ಕ್ರಮ ಸಂಖ್ಯೆ | ವರ್ಗೀಕರಣ | ಮೀಸಲು ರಹಿತ | ಮಹಿಳೆ | ಮಾಜಿ ಸೈನಿಕ | ಗ್ರಾಮೀಣ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ | ಒಟ್ಟು |
|---|---|---|---|---|---|---|---|
| 1. | ಸಾಮಾನ್ಯ ವರ್ಗ | 02 | 03 | 01 | 03 | 01* | **10** |
| 2. | ಪರಿಶಿಷ್ಟ ಜಾತಿ | 02 | - | 01 | - | - | **03** |
| 3. | ಪರಿಶಿಷ್ಟ ಪಂಗಡ | - | 01 | - | - | - | **01** |
| 4. | ಪ್ರವರ್ಗ-I | 01 | - | - | - | - | **01** |
| 5. | ಪ್ರವರ್ಗ-II ಎ | 02 | - | 01 | - | - | **03** |
| 6. | ಪ್ರವರ್ಗ-III ಎ | - | - | 01 | - | - | **01** |

| | | | | | | | |
|---|---|---|---|---|---|---|---|
| 7. | ಪ್ರವರ್ಗ-III ಬಿ | - | 01 | - | - | - | 01 |
| **ಒಟ್ಟು** | | **07** | **05** | **04** | **03** | **01** | **20** |

* ಚಲನವಲನ ವೈಕಲ್ಯ -ಮೆದುಳಿನ ಪಾರ್ಶ್ವ ವಾಯು, ಕುಷ್ಠ ರೋಗ ನಿವಾರಿತ, ಕುಬ್ಜತೆ, ಆಸಿಡ್ ದಾಳಿಗೆ ತುತ್ತಾದವರು ಮತ್ತು ಬಹುವಿಧ ಸ್ನಾಯು ಸೆಳೆತ ಒಳಗೊಂಡಂತೆ.

**371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳಿಯ ವೃಂದ**

**ಬೆರಳಚ್ಚುಗಾರರು - 04 ಹುದ್ದೆಗಳು**

| ಕ್ರಮ ಸಂಖ್ಯೆ | ವರ್ಗೀಕರಣ | ಮೀಸಲು ರಹಿತ | ಮಹಿಳೆ | ಗ್ರಾಮೀಣ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ | ಒಟ್ಟು |
|---|---|---|---|---|---|---|
| 1. | ಸಾಮಾನ್ಯ ವರ್ಗ | - | - | 01 | 01* | **02** |
| 2. | ಪರಿಶಿಷ್ಟ ಜಾತಿ | - | 01 | - | - | **01** |
| 3. | ಪ್ರವರ್ಗ-II ಎ | 01 | - | - | - | **01** |
| **ಒಟ್ಟು** | | **01** | **01** | **01** | **01** | **04** |

*ಅಂಧ ಮತ್ತು ದೃಷ್ಟಿ ಮಾಂದ್ಯ

## ಆದೇಶ ಜಾರಿಕಾರರ ಹುದ್ದೆಗಳು

**ಉಳಿಕೆ ಮೂಲ ವೃಂದ**

**ಆದೇಶ ಜಾರಿಕಾರರು - 01 ಹುದ್ದೆ**

| ಕ್ರಮ ಸಂಖ್ಯೆ | ವರ್ಗೀಕರಣ | ಗ್ರಾಮೀಣ | ಒಟ್ಟು |
|---|---|---|---|
| 1 | ಸಾಮಾನ್ಯ ವರ್ಗ (GM) | 1 | 1 |

**371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳಿಯ ವೃಂದ**

**ಆದೇಶ ಜಾರಿಕಾರರು - 04 ಹುದ್ದೆಗಳು**

| ಕ್ರಮ ಸಂಖ್ಯೆ | ವರ್ಗೀಕರಣ | ಮೀಸಲು ರಹಿತ | ಮಹಿಳಾ | ಒಟ್ಟು |
|---|---|---|---|---|
| 1 | ಸಾಮಾನ್ಯ ವರ್ಗ | 1 | 1 | 2 |
| 2 | ಪರಿಶಿಷ್ಟ ಜಾತಿ | 1 | - | 1 |
| 3 | ಪರಿಶಿಷ್ಟ ಪಂಗಡ | 1 | - | 1 |
| | **ಒಟ್ಟು** | 3 | 1 | 4 |

**ಜವಾನ ಹುದ್ದೆಗಳು**
**ಉಳಿಕೆ ಮೂಲ ವೃಂದ**
**ಜವಾನ - 63 ಹುದ್ದೆಗಳು**

| ಕ್ರಮ ಸಂಖ್ಯೆ | ವರ್ಗೀಕರಣ | ಮೀಸಲು ರಹಿತ | ಮಹಿಳಾ | ಮಾಜಿ ಸೈನಿಕ | ಗ್ರಾಮೀಣ | ಕನ್ನಡ ಮಾಧ್ಯಮ | ಯೋಜನ ನಿರಾಶ್ರಿತ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ | ಇತರೆ | ಒಟ್ಟು |
|---|---|---|---|---|---|---|---|---|---|---|
| 1 | ಸಾಮಾನ್ಯ ವರ್ಗ | 6 | 10 | 4 | 8 | 1 | 1 | 1*<br>1** | - | 32 |
| 2 | ಪರಿಶಿಷ್ಟ ಜಾತಿ | 2 | 2 | 1 | 1 | - | 1 | 1*** | - | 8 |
| 3 | ಪರಿಶಿಷ್ಟ ಪಂಗಡ | - | 1 | 1 | - | - | - | - | - | 2 |
| 4 | ಪ್ರವರ್ಗ-I | - | 1 | - | 1 | - | - | - | - | 2 |
| 5 | ಪ್ರವರ್ಗ-2 ಎ | 2 | 2 | 1 | 2 | - | 1 | 1*** | - | 9 |
| 6 | ಪ್ರವರ್ಗ-2 ಬಿ | - | 1 | - | 1 | - | 1 | - | - | 3 |
| 7 | ಪ್ರವರ್ಗ-3 ಎ | - | 1 | - | 1 | 1 | - | - | - | 3 |
| 8 | ಪ್ರವರ್ಗ-3 ಬಿ | 1 | 1 | 1 | - | - | - | - | 1 | 4 |
| | **ಒಟ್ಟು** | **11** | **19** | **8** | **14** | **2** | **4** | **4** | **1** | **63** |

* ಚಲನವಲನ ವೈಕಲ್ಯ -ಮೆದುಳಿನ ಪಾರ್ಶ್ವ ವಾಯು, ಕುಷ್ಠ ರೋಗ ನಿವಾರಿತ, ಕುಬ್ಜತೆ, ಆಸಿಡ್ ದಾಳಿಗೆ ತುತ್ತಾದವರು ಮತ್ತು ಬಹುವಿಧ ಸ್ನಾಯು ಸೆಳೆತ ಒಳಗೊಂಡಂತೆ.

**ಅಂಧ ಮತ್ತು ದೃಷ್ಟಿ ಮಾಂದ್ಯ

*** i) Autism, intellectual disability, specific learning disability and mental illness ii) Multiple disabilities from amongst persons under clauses (a) to (d) including deaf-blindness in the posts identified for each disabilities.

**371-ಜೆ (ಕಲ್ಯಾಣ ಕರ್ನಾಟಕ ಪ್ರದೇಶ) ಸ್ಥಳೀಯ ವೃಂದ**
**ಜವಾನ - 24 ಹುದ್ದೆಗಳು**

| ಕ್ರಮ ಸಂಖ್ಯೆ | ವರ್ಗೀಕರಣ | ಮೀಸಲು ರಹಿತ | ಮಹಿಳೆ | ಮಾಜಿ ಸೈನಿಕ | ಗ್ರಾಮೀಣ | ಕನ್ನಡ ಮಾಧ್ಯಮ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ | ಒಟ್ಟು |
|---|---|---|---|---|---|---|---|---|
| 1 | ಸಾಮಾನ್ಯ ವರ್ಗ | 1 | 4 | 1 | 4 | 1 | 1* | 12 |
| 2 | ಪರಿಶಿಷ್ಟ ಜಾತಿ | - | 2 | - | 1 | - | 1* | 4 |
| 3 | ಪ್ರವರ್ಗ-2 ಎ | 1 | 2 | - | 1 | - | 1* | 5 |
| 4 | ಪ್ರವರ್ಗ-2 ಬಿ | 1 | - | - | - | - | - | 1 |

| | | | | | | | | |
|---|---|---|---|---|---|---|---|---|
| 5 | ಪ್ರವರ್ಗ-3 ಎ | 1 | - | - | - | - | - | 1 |
| 6 | ಪ್ರವರ್ಗ-3 ಬಿ | 1 | - | - | - | - | - | 1 |
| | **ಒಟ್ಟು** | **5** | **8** | **1** | **6** | **1** | **3** | **24** |

*ಅಂಧ ಮತ್ತು ದೃಷ್ಟಿ ಮಾಂದ್ಯ

| | | |
|---|---|---|
| | **ನೇಮಕಾತಿ ವಿಧಾನ** | ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು 1982 ಹಾಗೂ ತಿದ್ದುಪಡಿ ನಿಯಮಗಳು 2007 ಮತ್ತು 2021 |
| | **ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸಬೇಕಾದ ಜಾಲತಾಣ** | https://districts.ecourts.gov.in/ccc-online-recruitment |
| | **ಅಭ್ಯರ್ಥಿಗಳು ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕ** | ಆನ್ ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು: **ಪ್ರಾರಂಭ ದಿನಾಂಕ: 21 ನೇ ಏಪ್ರಿಲ್,2022 ರಿಂದ ಕೊನೆಯ ದಿನಾಂಕ: 20 ನೇ ಮೇ, 2022 ರ ರಾತ್ರಿ 11.59 ಗಂಟೆಯೊಳಗಾಗಿ**<br><br>**<u>ಶುಲ್ಕ ಪಾವತಿಸಲು ಕೊನೆಯ ದಿನಾಂಕ</u>**<br>ಆನ್ ಲೈನ್ ಮೂಲಕ: 20/05/2022 ರಾತ್ರಿ 11.59 ಗಂಟೆಯೊಳಗಾಗಿ<br>ಇ-ಚಲನ್ ಮೂಲಕ: 21/05/2022 ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಮಾತ್ರ |
| | **ಪಾವತಿಸಬೇಕಾದ ಶುಲ್ಕ** | **1) ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ರೂ.200/-**<br><br>**2) ಪ್ರವರ್ಗ-II ಎ , ಪ್ರವರ್ಗ-II ಬಿ , ಪ್ರವರ್ಗ-III ಎ, ಪ್ರವರ್ಗ-III ಬಿ ಸೇರಿದ ಅಭ್ಯರ್ಥಿಗಳು ರೂ.100/-**<br><br>**3) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಪ್ರವರ್ಗ-I ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ**<br><br>1) ಅಭ್ಯರ್ಥಿಗಳು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಲೆಕ್ಟ್ ಪೇಜ್ ನಲ್ಲಿ ನೆಟ್ ಅಥವಾ ಇಂಟರ್ನೆಟ್ ಬ್ಯಾಂಕಿಗ್ / ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್ ಮೂಲಕ ಶುಲ್ಕ ಸಂದಾಯ ಮಾಡತಕ್ಕದ್ದು.<br>**ಅಥವಾ**<br><br>2) ಇ-ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ: ಅಭ್ಯರ್ಥಿಗಳು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಲೆಕ್ಟ್ ಪೇಜ್ ಮೂಲಕ PDF ನಮೂನೆಯಲ್ಲಿ ಇ-ಚಲನ್ ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯ ವ್ಯವಹಾರದ ವೇಳೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು, ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಾವತಿ ಮಾಡತಕ್ಕದ್ದು.<br><br>**ಸೂಚನೆ:**<br><br>1. **ಶುಲ್ಕವನ್ನು "ವಿಲೇಖನಾಧಿಕಾರಿಗಳು, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು" ಇವರ ಹೆಸರಿಗೆ ಪಾವತಿಸತಕ್ಕದ್ದು** ಹಾಗೂ ಬೇರೆ ಯಾವುದೇ ಹೆಸರಿನಲ್ಲಿ ಪಾವತಿಸಿದ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅರ್ಜಿಯು ತಿರಸ್ಕೃತ ಗೊಳ್ಳುತ್ತದೆ.<br>2. ಆನ್ ಲೈನ್ ಅಥವಾ ಇ-ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ ಹೊರತುಪಡಿಸಿ ಇನ್ಯಾವುದೇ ರೀತಿಯ ಅಂದರೆ ಡಿಮ್ಯಾಂಡ್ ಡ್ರಾಫ್ಟ್ /ಪೋಸ್ಟಲ್ಆರ್ಡರ್ / ಮನಿಆರ್ಡರ್ / ಚೆಕ್ / ನಗದು ಹಾಗೂ ಇನ್ನಿತರೆ ನಮೂನೆಗಳಲ್ಲಿ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.<br>3.ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲ.<br>**4.ನಿಗದಿತ ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**<br>5. ಶುಲ್ಕ ಪಾವತಿಸಿಯಾಗಿರುವ ಬಗ್ಗೆ ಎಸ್.ಬಿ.ಐ ಬ್ಯಾಂಕಿನೊಡನೆ ಮಾತ್ರ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು. |

| | | |
|---|---|---|
| | | ಶುಲ್ಕ ಪಾವತಿಸುವ ಪ್ರಕ್ರಿಯೆಯಲ್ಲಿ ಉಂಟಾಗುವ ವೈಫಲ್ಯಕ್ಕೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ. |
| | **ವೇತನ ಶ್ರೇಣಿ** | |
| | ಶೀಘ್ರಲಿಪಿಗಾರರು ಗ್ರೇಡ್-III | ರೂ.27650-650-29600-750-32600-850-36000-950-39800-1100-46400-1250-52650 |
| | ಬೆರಳಚ್ಚುಗಾರರು | ರೂ.21400-500-22400-550-24600-600-27000-650-29600-750-32600-850-36000-950-39800-1100-42000 |
| | ಆದೇಶ ಜಾರಿಕಾರ | ರೂ.19950-450-20400-500-22400-550-24600-600-27000-650-29600-750-32600-850-36000-950-37900 |
| | ಜವಾನ | ರೂ.17000-400-18600-450-20400-500-22400-550-24600-600-27000-650-28950 |
| | **ಶೈಕ್ಷಣಿಕ ವಿದ್ಯಾರ್ಹತೆ** | |
| | ಶೀಘ್ರಲಿಪಿಗಾರರು ಗ್ರೇಡ್-III | 1. ಪದವಿಪೂರ್ವ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ಮೂರು ವರ್ಷಗಳ ಡಿಪ್ಲೊಮಾ ಕಮರ್ಷಿಯಲ್ ಪ್ರಾಕ್ಟೀಸ್ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ **ಹಾಗೂ**<br>2. ಸಾರ್ವಜನಿಕ ಶಿಕ್ಷಣ ಇಲಾಖೆಯು ನಡೆಸುವ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ಹಿರಿಯ ದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ಡಿಪ್ಲೊಮಾ ಕಮರ್ಷಿಯಲ್ ಪ್ರಾಕ್ಟೀಸ್ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ |
| | ಬೆರಳಚ್ಚುಗಾರರು | 1.ಪದವಿಪೂರ್ವ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ಮೂರು ವರ್ಷಗಳ ಡಿಪ್ಲೊಮಾ ಕಮರ್ಷಿಯಲ್ ಪ್ರಾಕ್ಟೀಸ್ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ ಹಾಗೂ<br>2.ಸಾರ್ವಜನಿಕ ಶಿಕ್ಷಣ ಇಲಾಖೆಯು ನಡೆಸುವ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಹಿರಿಯ ದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ಡಿಪ್ಲೊಮಾ ಕಮರ್ಷಿಯಲ್ ಪ್ರಾಕ್ಟೀಸ್ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ |
| | ಆದೇಶ ಜಾರಿಕಾರ | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.<br>ವಾಹನ ಚಾಲನ ಪರವಾನಿಗೆ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. |
| | ಜವಾನ | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ; ಕನ್ನಡ ಓದಲು ಬರೆಯಲು ಬರಬೇಕು |
| | **ವಯೋಮಿತಿ** | ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಠ ವಯಸ್ಸು ಈ ಕೆಳಕಂಡಂತಿರಬೇಕುಃ<br>1. ಸಾಮಾನ್ಯ ಅಭ್ಯರ್ಥಿಗಳು 35 ವರ್ಷ ಮೀರಿರಬಾರದು.<br>2. ಪ್ರವರ್ಗ-II(ಎ), ಪ್ರವರ್ಗ-II-(ಬಿ), ಪ್ರವರ್ಗ-III-(ಎ), ಮತ್ತು ಪ್ರವರ್ಗ-III-(ಬಿ) ರ ಅಭ್ಯರ್ಥಿಗಳು 38 ವರ್ಷ ಮೀರಿರಬಾರದು.<br>3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-I ರ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು.<br><br>ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ನಿಯಮ 6(2) ನೇ ನಿಯಮದ ಅನುಸಾರ. ಈ ಕೆಳಗಿನ ಸಂಧರ್ಭಗಳಲ್ಲಿ ಸದರಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಸಡಿಲಿಕೆ ಮಾಡಲಾಗುವುದು.<br><br>**(1).** ಅಭ್ಯರ್ಥಿಯು ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ |

| | | |
|---|---|---|
| | | ಅಥವಾ ಕೇಂದ್ರ ಅಧಿನಿಯಮದಡಿಯಲ್ಲಿ ಸರ್ಕಾರದ ಮೂಲಕ ಸ್ಥಾಪಿತವಾದ ಮತ್ತು ಸರ್ಕಾರದ ಅಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದಲ್ಲಿ ಅಥವಾ ಯಾವುದೇ ಹುದ್ದೆಯನ್ನು ಹೊಂದಿದ್ದಲ್ಲಿ ಹಾಗೆ ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿ ಸಡಿಲಿಕೆಗೆ ಅರ್ಹರಾಗಿರುತ್ತಾರೆ.<br>**(2).** ಮಾಜಿಸೈನಿಕರಿಗೆ , ಕೇಂದ್ರಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ವರ್ಷಗಳ ಜೊತೆಗೆ 03 ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.<br>**(3).**ಅಭ್ಯರ್ಥಿಯು ದೈಹಿಕ ಅಂಗವಿಕಲತೆ ಹೊಂದಿರುವ ಸಂದರ್ಭದಲ್ಲಿ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.<br>**(4).** ಅಭ್ಯರ್ಥಿಯು ವಿಧವೆಯಾಗಿರುವ ಸಂದರ್ಭದಲ್ಲಿ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.<br><br>**ಸೂಚನೆಃ** ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಅನ್ ಲೈನ್ನಲ್ಲಿ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕವನ್ನು ಆಧರಿಸಿರುತ್ತದೆ. |
| | **ಸೇವಾ ಪರಿವೀಕ್ಷಣಾ ಅವಧಿ** | ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ. |
| | **ಸಂದರ್ಶನ** | |
| | ಶೀಘ್ರಲಿಪಿಗಾರರು ಗ್ರೇಡ್-III ಹಾಗೂ ಬೆರಳಚ್ಚುಗಾರರು | ಅರ್ಹತ ಶೈಕ್ಷಣಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳು ಹಾಗೂ ಈ ಪ್ರಾಧಿಕಾರ ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಒಟ್ಟು ಅಂಕಗಳ ಶೇಕಡಾ ಆಧಾರದ ಮೇಲೆ ಒಂದು ಹುದ್ದೆಗೆ 1:5 ಅನುಪಾತದಂತೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರಯಲಾಗುವುದು. ಸಂದರ್ಶನಕ್ಕೆ ಒಟ್ಟು 5 ಅಂಕಗಳನ್ನು ನಿಗದಿಪಡಿಸಲಾಗಿದೆ. |
| | ಆದೇಶ ಜಾರಿಕಾರ | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾ ಆಧಾರದ ಮೇಲೆ ಒಂದು ಹುದ್ದೆಗೆ 1:25 ಅನುಪಾತದಂತೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರಯಲಾಗುವುದು. ಸಂದರ್ಶನಕ್ಕೆ ಒಟ್ಟು 10 ಅಂಕಗಳನ್ನು ನಿಗದಿಪಡಿಸಲಾಗಿದೆ. |
| | ಜವಾನ | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾ ಆಧಾರದ ಮೇಲೆ ಒಂದು ಹುದ್ದೆಗೆ 1:10 ಅನುಪಾತದಂತೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರಯಲಾಗುವುದು. ಸಂದರ್ಶನಕ್ಕೆ ಒಟ್ಟು 10 ಅಂಕಗಳನ್ನು ನಿಗದಿಪಡಿಸಲಾಗಿದೆ. |
| | **ಆಯ್ಕೆ ವಿಧಾನ** | ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು 1982 ಹಾಗೂ ತಿದ್ದುಪಡಿ ನಿಯಮಗಳು 2007 ಮತ್ತು 2021 |
| | ಶೀಘ್ರಲಿಪಿಗಾರರು ಗ್ರೇಡ್-III ಹಾಗೂ ಬೆರಳಚ್ಚುಗಾರರು | ಆಯ್ಕೆ ಪಟ್ಟಿಯು ಕೆಳಗಿನ ಒಟ್ಟು ಅಂಕಗಳ ಆಧಾರದ ಮೇಲೆ ಸಿದ್ಧಪಡಿಸಲಾಗುವುದು<br><br>(1) ಅರ್ಹತ ಶೈಕ್ಷಣಿಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇಕಡಾ<br><br>(2)<br><br>**<u>ಶೀಘ್ರಲಿಪಿಗಾರರು ಗ್ರೇಡ್-III</u>**<br><br>ಒಂದು ನಿಮಿಷಕ್ಕೆ 120 ಶಬ್ದಗಳಂತೆ 5 ನಿಮಿಷಗಳ ಉಕ್ತ ಲೇಖನವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನೀಡಲಾಗುವುದು. ಅದನ್ನು ಲಿಪ್ಯಂತರಗೊಳಿಸಿ, ಬೆರಳಚ್ಚು ಮಾಡಲು 45 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಇದಕ್ಕೆ ಗರಿಷ್ಠ 100 ಅಂಕಗಳನ್ನು ನಿಗದಿಪಡಿಸಲಾಗಿದೆ. ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು.<br><br>**<u>ಬೆರಳಚ್ಚುಗಾರರು</u>**<br>ಬೆರಳಚ್ಚು ಮಾಡಲು ಉಕ್ತ ಲೇಖನವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನೀಡಲಾಗುವುದು. ಇದಕ್ಕೆ ಗರಿಷ್ಠ 100 ಅಂಕಗಳನ್ನು ನಿಗದಿಪಡಿಸಲಾಗಿದೆ. ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು.<br><br>(3) ಸಂದರ್ಶನದಲ್ಲಿ ಪಡೆಯುವ ಅಂಕಗಳು |
| | ಆದೇಶ ಜಾರಿಕಾರ ಹಾಗೂ ಜವಾನ | ಸಂದರ್ಶನದಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ |

| | | |
|---|---|---|
| | | **ಸೂಚನೆಃ** ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ಒಟ್ಟು ಅಂಕಗಳ ಶೇಕಡಾ ಸಮವಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅರ್ಹತೆಯ ಕ್ರಮವನ್ನು ಅವರ ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ ಮತ್ತು ವಯಸ್ಸಿನಲ್ಲಿ ಹಿರಿಯ ವ್ಯಕ್ತಿಯನ್ನು ಅರ್ಹತೆಯ ಕ್ರಮದಲ್ಲಿ ಮೇಲೆ ಇರಿಸಲಾಗುತ್ತದೆ |
| | **ಮೀಸಲಾತಿ ಕೋರುವ ಅಭ್ಯರ್ಥಿಗಳಿಗೆ ಸೂಚನೆ** | |
| | ಎ) ಜಾತಿ ಪ್ರಮಾಣ ಪತ್ರ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ , ಪ್ರವರ್ಗ-I, ಪ್ರವರ್ಗ-II(ಎ), ಪ್ರವರ್ಗ-II-(ಬಿ), ಪ್ರವರ್ಗ-III-(ಎ), ಮತ್ತು ಪ್ರವರ್ಗ-III-(ಬಿ) ಪ್ರವರ್ಗಗಳಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಮಾನ್ಯ ವಿರುವ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು. |
| | ಬಿ)ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ ಅಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು. |
| | ಸಿ) ಮಾಜಿ ಸೈನಿಕ | ಮಾಜಿ ಸೈನಿಕ ವರ್ಗದ ಅಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಮಿಲಿಟರಿ ಸೇವೆಯಿಂದ ಬಿಡುಗಡೆ ಮಾಡಲಾದ ಅಥವಾ ವಿಮುಕ್ತಿಗೊಳಿಸಿದ ಪ್ರಮಾಣಪತ್ರವನ್ನು ಆಯಾ ಜಿಲ್ಲಾ ಸೈನಿಕ್ ಬೋರ್ಡ್ ಅಥವಾ ಸಕ್ಷಮ ಪ್ರಾಧಿಕಾರದಿಂದ ಪಡೆದು ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು. |
| | ಡಿ) ಗ್ರಾಮೀಣ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ ಪ್ರವರ್ಗದಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಮಾನ್ಯವಿರುವ ಪ್ರಮಾಣಪತ್ರವನ್ನು ಆನ್ ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು.<br><br>**ಗ್ರಾಮೀಣ ಅಭ್ಯರ್ಥಿ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವಂತಹ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಮಾನ್ಯವಿರುವ ಕೆನೆ ಪದರ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ ಹಾಗೂ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರವನ್ನು ಆನ್ ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು. |
| | ಇ) 371-ಜೆ ಸ್ಥಳೀಯ ವೃಂದ | ಸ್ಥಳೀಯ ವೃಂದ (371-ಜೆ ಹೈದ್ರಾಬಾದ್- ಕರ್ನಾಟಕ ಪ್ರದೇಶ)ರಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಮಾನ್ಯವಿರುವ 371-ಜೆ ಹೈದ್ರಾಬಾದ್- ಕರ್ನಾಟಕ ಅರ್ಹತಾ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು. |
| | ಈ) ಇತರೆ | ಇತರೆ ವರ್ಗದಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣಪತ್ರವನ್ನು ಆನ್ ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು (Section 6 of the Transgender Persons (Protection of Rights) Act, 2019). |
| | ಉ) ಸರ್ಕಾರಿ ನೌಕರ (ರಾಜ್ಯ / ಕೇಂದ್ರ / ಸಾರ್ವಜನಿಕ ಉದ್ದಿಮೆ) | ಸರ್ಕಾರಿ ನೌಕರ (ರಾಜ್ಯ / ಕೇಂದ್ರ / ಸಾರ್ವಜನಿಕ ಉದ್ದಿಮೆ) ವರ್ಗದಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಹುದ್ದೆಗೆ ಆಯ್ಕೆಯಾದ ಸಂದರ್ಭದಲ್ಲಿ ತಾವು ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಯಿಂದ ನಿರಪೇಕ್ಷಣಾ ಪತ್ರವನ್ನು ಪಡೆದು ಹಾಜರುಪಡಿಸತಕ್ಕದ್ದು. |
| | ಊ) ಯೋಜನಾ ನಿರಾಶ್ರಿತ | ಯೋಜನಾ ನಿರಾಶ್ರಿತರು ಅಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸ 23 ಸೆನೆನಿ 99, ದಿನಾಂಕಃ 23/11/2000 ರನ್ವಯ ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಹಾಗೂ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಸದರಿ ಪ್ರಮಾಣ ಪತ್ರವನ್ನು ಹಾಜರುಪಡಿಸತ್ಕದ್ದು. |
| | **ದಾಖಲೆಗಳ ಪರಿಶೀಲನೆ** | **ಶೈಕ್ಷಣಿಕ ವಿದ್ಯಾರ್ಹತೆ** ಅಭ್ಯರ್ಥಿಯು ಮೂಲ ಅಂಕಪಟ್ಟಿ ಗಳಾದ ದ್ವಿತೀಯ ಪಿ.ಯು.ಸಿ ಅಥವಾ ಮೂರು ವರ್ಷಗಳ ಡಿಪ್ಲೊಮಾ ಕಮರ್ಷಿಯಲ್ ಪ್ರಾಕ್ಟೀಸ್ ಪರೀಕ್ಷೆ, ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ಹಿರಿಯ ದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆಯ ಮೂಲ |

| | | |
|---|---|---|
| | | ಅಂಕಪಟ್ಟಿಯನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಪ್ರಾಧಿಕಾರದ ಮುದೆ ಹಾಜರುಪಡಿಸತಕ್ಕದ್ದು.<br><br>**ಜನ್ಮದಿನಾಂಕ:** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಅಥವಾ ಮೂಲ ಜನ್ಮದಿನಾಂಕ ಪ್ರಮಾಣ ಪತ್ರವನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಪ್ರಾಧಿಕಾರದ ಮುದೆ ಹಾಜರುಪಡಿಸತಕ್ಕದ್ದು.<br><br>**ಮೀಸಲಾತಿ ಕೋರುವ ಮಾನ್ಯವಿರುವ ಮೂಲ ಪ್ರಮಾಣ ಪತ್ರಗಳನ್ನು** ಅಭ್ಯರ್ಥಿಯು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಪ್ರಾಧಿಕಾರದ ಮುದೆ ಹಾಜರುಪಡಿಸತಕ್ಕದ್ದು.<br><br>**ಗುರುತಿನ ಪುರಾವೆ:** ಅಭ್ಯರ್ಥಿಯು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಗುರುತಿನ ಪುರಾವೆಯಾಗಿ ಮೂಲ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಇತರೆಗಳನ್ನು ಪ್ರಾಧಿಕಾರದ ಮುದೆ ಹಾಜರುಪಡಿಸತಕ್ಕದ್ದು.<br>ಪ್ರಾಧಿಕಾರವು ನಿರ್ದೇಶಿಸಿದಾಗ ಸಂಬಂಧಪಟ್ಟ ದಾಖಲೆಗಳನ್ನು ಅಭ್ಯರ್ಥಿಗಳು ಹಾಜರುಪಡಿಸತಕ್ಕದ್ದು. |
| | **ನಡತೆ ಪ್ರಮಾಣ ಪತ್ರ** | ಅಭ್ಯರ್ಥಿಯು ಉತ್ತಮ ನಡತೆಯ ಬಗ್ಗೆ ಶಾಲೆ/ ಕಾಲೇಜಿಗೆ ಸಂಬಂಧಿಸದ ತನಗೆ ಚೆನ್ನಾಗಿ ಪರಿಚಯವಿರುವ ಹಾಗೂ ಸಂಬಂಧಿಯಾಗಿರದ **ಇಬ್ಬರು** ಗೌರವಾನ್ವಿತ ವ್ಯಕ್ತಿಗಳಿಂದ ಸಹಿ ಮತ್ತು ಮೊಹರು ಒಳಗೊಂಡಂತೆ **ಎರಡು** ಹಾಗೂ ತಾನು ಕೊನೆಯದಾಗಿ ಓದಿದ ಸಂಸ್ಥೆ / ಕಾಲೇಜಿನ ಪ್ರಾಂಶುಪಾಲರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಸಹಿ ಮತ್ತು ಮೊಹರು ಒಳಗೊಂಡಂತೆ ಪಡೆದ **ಒಂದು** ನಡತೆ ಪ್ರಮಾಣ ಪತ್ರವನ್ನು *(ಒಟ್ಟು 3)* ಆರು ತಿಂಗಳ ಅವಧಿ ಮೀರದ ಹಾಗೆ ಪಡೆದು ಪ್ರಾಧಿಕಾರವು ನಿರ್ದೇಶಿಸಿದಾಗ ಹಾಜರುಪಡಿಸತಕ್ಕದ್ದು. |
| | **ಸಾಮಾನ್ಯ ಸೂಚನೆಗಳು** | • ಆನ್ ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಓದಿ ಅನುಸರಿಸಬೇಕು, ಅಪೂರ್ಣ ಅರ್ಜಿಗಳನ್ನು ಯಾವುದೇ ಪತ್ರವ್ಯವಹಾರಕ್ಕೂ ಅವಕಾಶವಿಲ್ಲದೆ ತಿರಸ್ಕರಿಸಲಾಗುವುದು.<br><br>• ಅಭ್ಯರ್ಥಿಯು ಸರಿಯಾದ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.<br><br>• ಪ್ರಾಧಿಕಾರದಿಂದ ನೀಡುವ ಸೂಚನೆ / ಯಾವುದೇ ಮಾಹಿತಿಯನ್ನು ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯಲ್ಲಿ ನಮೂದಿಸಿರುವ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಗೆ ತಿಳಿಸಲಾಗುವುದು. ಒಂದುವೇಳೆ ಅಭ್ಯರ್ಥಿಗಳಿಗೆ ಇ-ಮೇಲ್ ಅಥವಾ ಸಂದೇಶ ತಲುಪದಿದ್ದಲ್ಲಿ ಈ ನೇಮಕಾತಿ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.<br><br>• ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಹಂತದಲ್ಲಿ ಅಗತ್ಯಪಡಿಸಿರುವ ದಾಖಲೆಗಳನ್ನು / ಪ್ರಮಾಣ ಪತ್ರಗಳನ್ನು ಅಪ್‌ಲೋಡ್ ಮಾಡಬೇಕು<br><br>• ಬೆರಳಚ್ಚು ಪರೀಕ್ಷೆಗೆ / ಮೌಖಿಕ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.<br><br>• ಅಭ್ಯರ್ಥಿಗಳು ಅಭ್ಯರ್ಥಿಕೆಯ ಸಂದರ್ಭದಲ್ಲಿ ಸಿಬ್ಬಂದಿ ಅಥವಾ ಸಿಬ್ಬಂದಿಯೇತರ ಮೂಲಗಳ ಮೂಲಕ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು / ಅಭ್ಯರ್ಥಿಕೆಯನ್ನು ಅನರ್ಹಗೊಳಿಸಲಾಗುವುದು.<br><br>• ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಆತನ / ಆಕೆಯ ಅಭ್ಯರ್ಥಿಕೆಯು ರದ್ದಾಗುತ್ತದೆ ಮತ್ತು ಅವರ ವಿರುದ್ದ ತಪ್ಪು ಮಾಹಿತಿ ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ವ್ಯವಹರಣೆಯನ್ನು ಜರುಗಿಸಲಾಗುವುದು.<br><br>• ಅಭ್ಯರ್ಥಿಯು ನಿಗದಿಪಡಿಸಿರುವ ಶುಲ್ಕವನ್ನು ಪಾವತಿ ಮಾಡಿದ ರಶೀದಿಯನ್ನು ತಪ್ಪದೆ ಅಪ್ ಲೋಡ್ ಮಾಡಬೇಕು |

| | | |
|---|---|---|
| | **ಅರ್ಜಿಯ ನಿರಾಕರಣೆ ಮತ್ತು ಕ್ರಿಮಿನಲ್ ಮೊಕದ್ದಮೆ** | ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿದ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ, ಅಭ್ಯರ್ಥಿಯ ಉಮೇದುವಾರಿಕೆಯು ನಿರಾಕರಣೆಗೆ ಹೊಣೆಗಾರನಾಗಿರುತ್ತಾನೆ ಹಾಗೂ ಕ್ರಿಮಿನಲ್ ಮೊಕದ್ದಮೆಗೆ ಸಹ ಹೊಣೆಗಾರನಾಗಿರುತ್ತಾನೆ. |

ಸಹಿ/-

**( ಅನಿಲ್ ಬಿ.ಕಟ್ಟಿ )**
**ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,**
**ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು**

**ಪ್ರತಿಯನ್ನು ಗೌರವಗೊಳೊಂದಿಗೆ ಮಾಹಿತಿಗಾಗಿಃ**

ಮಾನ್ಯ ಮಹಾ ವಿಲೇಖನಾಧಿಕಾರಿಗಳು, ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು.

**ಪ್ರತಿಗಳುಃ-**

1. ಪ್ರಧಾನ ಕಾರ್ಯದರ್ಶಿಗಳು, ಕಾನೂನು ಇಲಾಖೆ, ಬೆಂಗಳೂರು
2. ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಕಲಬುರ್ಗಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರಕನ್ನಡ, ವಿಜಯಪುರ, ಯಾದಗಿರಿ - ***ಅಧಿಸೂಚನೆಯನ್ನು ತಮ್ಮ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಿಲು ಕೋರಲಾಗಿದೆ.***
3. ಮುಖ್ಯ ನ್ಯಾಯಾಧೀಶರು, ಲಘುವ್ಯವಹಾರಗಳ ನ್ಯಾಯಾಲಯ, ಬೆಂಗಳೂರು - ***ಅಧಿಸೂಚನೆಯನ್ನು ತಮ್ಮ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಿಲು ಕೋರಲಾಗಿದೆ.***
4. ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು
5. ನೋಡಲ್ ಅಧಿಕಾರಿ, ಇ-ಗೆಜೆಟ್, ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು - ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಗಾಗಿ
6. ಅಧಿಸೂಚನೆ ಕಡತ